**ಓ ಎಸ್ ನಂಃ 325/2014**

**ಪಿ. ಡಬ್ಲ್ಯೂ ಃ 1**

**ದಿಃ 31.01.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ 14 ನೇ ಪ್ರತಿವಾದಿ ಪರ ಶ್ರೀ ಜಿ ಪಿ ವಕೀಲರಿಂದ ಃ**

ಓ ಎಸ್ 153/2005 ಇದು ಹೈಕೋರ್ಟ್ ನಿಂದ ರಿಮೆಂಡ್ ಆದ ನಂತರ ಓ ಎಸ್ 360/2022 ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ, ಮಾಗಡಿ ಇಲ್ಲಿ ಚಾಲ್ತಿಯಲ್ಲಿದೆ ಎಂದರೆ ಸರಿ. ಓ ಎಸ್ 153/2005 ರಲ್ಲಿ ಪಿ ವಿ ಭಟ್ ಎಂಬುವವರು ನಮ್ಮ ವಕೀಲರಾಗಿದ್ದರು ಎಂದರೆ ಸರಿ. ಆ ಸಮಯದಲ್ಲಿ ನಾನು ಪ್ರತಿವಾದ ಪತ್ರ ಸಲ್ಲಿಸಿ ಅಗ್ರಿಮೆಂಟ್ ಮೋಸದ್ದು ಮತ್ತು ಸೃಷ್ಟಿಸಿದ ದಾಖಲೆ ಎಂದು ಹೇಳಿದ್ದೇವು ಎಂದರೆ ಸರಿ. ಸದರಿ ದಾವೆ ಬಗ್ಗೆ ಈ ದಾವೆಯಲ್ಲಿ ಹೇಳಿಲ್ಲ ಎಂದರೆ ಸರಿ. ಈಗ ನಾನು ಚಂದ್ರಕುಮಾರ್ ಎಂಬ ವಕೀಲರನ್ನು ನೇಮಿಸಿಕೋಂಡು ಎಲ್ಲ ವಿಚಾರಣೆ ಆದ ನಂತರ ನನ್ನ ಸಹಿಯನ್ನು ಒಂದು ಖಾಲಿ ಪೇಪರ್ ನಲ್ಲಿ ಪಡೆದು ಕರಾರುಪತ್ರ ಸೃಷ್ಟಿಸಿಕೊಂಡಿದ್ದಾರೆ ಎಂದು ಕೇಸ್ ಹಾಕಿದ್ದೇನೆ ಎಂದರೆ ಸರಿ.

ಸ.ನಂ. 131/4 ಇದರ ಬಗ್ಗೆ ಮಾಗಡಿ ನ್ಯಾಯಾಲಯದಲ್ಲಿ ನಡೆಯುತ್ತಿರುವ 4/5 ಕೇಸ್ ಗಳಲ್ಲಿ 14 ನೇ ಪ್ರತಿವಾದಿ ಮೋಸದಿಂದ ಕರಾರುಪತ್ರ ಬರೆಯಿಸಿಕೊಂಡಿದ್ದಾನೆ, ನನ್ನ ಸಹಿಯನ್ನು ಖಾಲಿ ಪೇಪರ್ ನಲ್ಲಿ ಪಡೆದಿದ್ದಾನೆ ಎಂದು ಯಾವುದೆ ಪ್ರಕರಣದಲ್ಲಿ ಹೇಳಿಲ್ಲ ಎಂದರೆ ಸರಿ. ಮರಿರಂಗಯ್ಯ ನ ಬಗ್ಗೆ ತಾಲ್ಲೂಕು ಆಫೀಸ್ ನಲ್ಲಿ, ಎ ಸಿ ಮತ್ತು ಡಿ ಸಿ ಕೋರ್ಟ್ ಗಳಲ್ಲಿ ಯಾವುದೆ ಕೇಸ್ ಇಲ್ಲ ಎಂದರೆ ಸರಿ. ನರಸೇಗೌಡ ನ ಕೇಸ್ ಸಹ ಡಿ ಸಿ ನ್ಯಾಯಾಲಯದಲ್ಲಿ ಮುಗಿದಿದೆ ಎಂದರೆ ಸರಿ. ಒಂದೊಂದು ಪ್ರಕರಣದಲ್ಲಿಯೂ ನಾನು ಒಂದು ರೀತಿಯ ತಕರಾರುಗಳನ್ನು ಹಾಕಿ ನಾನು ಕೇಸ್ ನಡೆಸುತ್ತಿದ್ದೇನೆ ಎಂದರೆ ಸರಿಯಲ್ಲ. ನರಸಿಂಹೇಗೌಡ ಇವರು ಹೊಸದಾಗಿ ಸಲ್ಲಿಸಿದ ದಾವೆ ಓ ಎಸ್ 552/2021 ಇದರಲ್ಲಿಯೂ ಸಹ ಈ ದಾವೆ ಓ ಎಸ್ 153/2005 ರ ಬಗ್ಗೆ ಯಾವುದೆ ವಿಷಯ ತಿಳಿಸಿಲ್ಲ ಎಂದರೆ ಸರಿ. ಆ ಪ್ರಕರಣದಲ್ಲಿ ಮರಿರಂಗಯ್ಯ ಪಾರ್ಟಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಎಲ್ಲ ಪ್ರಕರಣಗಳಲ್ಲಿ ನಾನು ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ 11 ರಿಂದ 13 ಮತ್ತು ಅವರ ಪರ ವಕೀಲರನ್ನು ಕರೆಸಲಾಯಿತು ಹಾಗೂ ಉಳಿದ ಪ್ರತಿವಾದಿಗಳು ಮತ್ತು ಅವರ ಪರ ವಕೀಲರನ್ನು ಕರೆಸಲಾಯಿತು. ಅವರು ಗೈರುಹಾಜರಿದ್ದರಿಂದ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.